| ಕರ್ನಾಟಕ ವಿಧಾನಪರಿಷತ್ತು | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 640 |
| ಸದಸ್ಯರ ಹೆಸರು: | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 10-07-2023 |
| ಉತ್ತರಿಸುವವರು: | ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಜಿಲ್ಲೆಯ ಆನೇಕಲ್ಲು ಬನ್ನೇರುಘಟ್ಟದಲ್ಲಿರುವ ರಾಷ್ಟ್ರೀಯ ಉದ್ಯಾನವನಕ್ಕೆ ಒಟ್ಟು ಎಷ್ಟು ಎಕರೆ ಜಮೀನು ಮಂಜೂರಾಗಿರುತ್ತದೆ: | ಬೆಂಗಳೂರು ಜಿಲ್ಲೆಯ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನವು ಸರ್ಕಾರದ ಅಧಿಸೂಚನೆ ಪ್ರಕಾರ ಒಟ್ಟು 26,897.61 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಒಳಗೊಂಡಿರುತ್ತದೆ. |
| ಆ) | ಬನ್ನೇರುಘಟ್ಟದಲ್ಲಿ ಸರ್ಕಾರಿ ಗೋಮಾಳ ಸರ್ವೆ ನಂ. 67ರಲ್ಲಿ 650 ಎಕರೆ ಇದ್ದು ಅದರಲ್ಲಿ ಭೋವಿ ಜನಾಂಗದವರಿಗೆ ಸುಮಾರು 65 ವರ್ಷಗಳ ಹಿಂದೆ ಕೃಷಿ ಜಮೀನನ್ನು ವ್ಯವಸಾಯ ಮಾಡಲು ಆ ಜನಾಂಗದವರಿಗೆ ಸಾಗುವಳಿ ನೀಡಿ ಈಗ ಜಮೀನನ್ನು ವಾಸಕ್ಕಾಗಿ ಮತ್ತು ವಾಣಿಜ್ಯ ಉಪಯೋಗಕ್ಕಾಗಿ ಬದಲಾವಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | **<u>ಕಂದಾಯ ಇಲಾಖೆಯ ಉತ್ತರ</u>**<br><br>ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿಯ ಬನ್ನೇರುಘಟ್ಟ ಗ್ರಾಮದ ಸ.ನಂ.67ರಲ್ಲಿರುವ ಜಮೀನು ಹಿಡುವಳಿ ಜಮೀನಾಗಿರುತ್ತದೆ. ಈ ಜಮೀನನ್ನು ಭೋವಿ ಜನಾಂಗದವರಿಗೆ ಸುಮಾರು 65 ವರ್ಷಗಳ ಜಿಗಣಿ ಹೋಬಳಿ ವ್ಯಾಪ್ತಿಯ ಭೂತಾನಹಳ್ಳಿ ಗ್ರಾಮದ ಸ.ನಂ.67ರಲ್ಲಿ 549-24 ಎಕರೆ/ಗುಂಟೆ ವಿಸ್ತೀರ್ಣದ ಪೈಕಿ 525-00 ಎಕರೆ ವಿಸ್ತೀರ್ಣದ ಜಮೀನನ್ನು 1935ರಲ್ಲಿ ಅರಣ್ಯ ಇಲಾಖೆಗೆ ಅಧಿಸೂಚಿಸಲಾಗಿದೆ. ನಂತರ ಭೋವಿ ಜನಾಂಗದವರಿಗೆ 1960ರಲ್ಲಿ ಭಾಗಶ: ವಿಸ್ತೀರ್ಣವು ಮಂಜೂರಾಗಿರುತ್ತದೆ.<br><br>ಅರಣ್ಯ ಇಲಾಖೆಯು 1935ರ ಅಧಿಸೂಚನೆಯಂತೆ ಅರಣ್ಯ ಇಲಾಖೆಯ ವ್ಯಾಪ್ತಿಗೆ ಒಳಪಡುವ ಜಮೀನನ್ನು ವಶಕ್ಕೆ ಪಡೆಯುತ್ತಿದ್ದು, ಭೋವಿ ಜನಾಂಗದವರು ಅನುಭವದಲ್ಲಿದ್ದ ಜಮೀನನ್ನು ಸಹ ಅರಣ್ಯ ಇಲಾಖೆಯ ವಶಕ್ಕೆ ಪಡೆಯಲಾಗುತ್ತಿದೆ. ಸದರಿ ಜಮೀನು ವಾಸಕ್ಕಾಗಿ ಅಥವಾ ವಾಣಿಜ್ಯ ಉಪಯೋಗಕ್ಕಾಗಿ ಬದಲಾವಣೆ ಯಾಗಿರುವುದಿಲ್ಲ. |

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| ಇ) | ಭೋವಿ ಪರಿಶಿಷ್ಟ ಜನಾಂಗದವರಿಗೆ ಅನ್ಯಾಯ ಮಾಡಿ ಅವರ ಜಮೀನನ್ನು ರಿಯಲ್ ಎಸ್ಟೇಟ್ ಮಾಡುವ ಜನರು ಜಮೀನನ್ನು ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮ ಏನು: | ಉದ್ಭವಿಸುವುದಿಲ್ಲ. |
| ಈ) | ಭೋವಿ ಪರಿಶಿಷ್ಟ ಜನಾಂಗದವರಿಗೆ ಅನ್ಯಾಯ ಮಾಡಿ ಅವರ ಜಮೀನನ್ನು ಮಾರಾಟ ಮಾಡಿರುವುದನ್ನು ರದ್ದುಗೊಳಿಸಿ ಮೂಲ ಭೋವಿ ಜನಾಂಗದ ವಾರಸುದಾರರಿಗೆ ಹಿಂದಿರುಗಿಸುವ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ಸರ್ಕಾರ ಆದೇಶ ಹೊರಡಿಸುವುದೆ: | ಉದ್ಭವಿಸುವುದಿಲ್ಲ. |
| ಉ) | ಅರಣ್ಯ ಇಲಾಖೆಯವರು ಭೋವಿ ಜನಾಂಗದ ಕೃಷಿ ಭೂಮಿಯನ್ನು ವಶಪಡಿಸಿಕೊಂಡಿರುವುದನ್ನು ರದ್ದು ಮಾಡಿ ಮೂಲ ಮಾಲೀಕರಿಗೆ ಮಂಜೂರು ಮಾಡಲಾಗುವುದೆ: | ಸರ್ಕಾರಿ ಆದೇಶ ಸಂಖ್ಯೆ:G-6416-Ft-27-33-35 ದಿನಾಂಕ:17.03.1934 ರಲ್ಲಿ ಭೂತಾನಹಳ್ಳಿ ಗ್ರಾಮದ ಸರ್ವೆ ನಂ.67, 68, 69 ಮತ್ತು 70ರಲ್ಲಿ ಒಟ್ಟು 539.27 ಎಕರೆ ಪ್ರದೇಶವು ಕಿರು ಅರಣ್ಯವೆಂದು ಘೋಷಿತವಾಗಿರುತ್ತದೆ. ಅಧಿಸೂಚಿತ ಅರಣ್ಯ ಪ್ರದೇಶವನ್ನು ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಕಲಂ 2ರನ್ವಯ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯದೆ ಮಂಜೂರು ಮಾಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. |
| ಊ) | ಅರಣ್ಯ ಇಲಾಖೆಯವರ ಸ್ವಾಧೀನದಿಂದ ಕೈ ಬಿಟ್ಟ ಜಮೀನನ್ನು ಮೂಲ ಜಮೀನು ಮಾಲೀಕರಿಗೆ ವ್ಯವಸಾಯ ಮಾಡಲು ಪುನಃ ನೀಡುವಂತೆ ಅರಣ್ಯ ಇಲಾಖೆಯವರಿಗೆ ಸರ್ಕಾರದಿಂದ ಸೂಚಿಸಲಾಗುವುದೆ? | ಅಧಿಸೂಚಿತ ಅರಣ್ಯ ಪ್ರದೇಶವನ್ನು ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಕಲಂ 2 ರನ್ವಯ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆಯದೆ ಮಂಜೂರು ಮಾಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. |

**(ಈಶ್ವರ ಬಿ. ಖಂಡ್ರೆ)**
**ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು**

**ಅಪಜೀ 38 ಎಫ್‌ಜಿಎಲ್ 2023**